# 2002
# COMMERCE AND ACCOUNTANCY
## Paper I

*Time : 3 Hours ]* *[ Maximum Marks : 300*

---

*INSTRUCTIONS*

Each question is printed both in English and in Kannada.

Answers must be written in the medium specified ( English *or* Kannada ) in the Admission Ticket issued to you, which must be stated clearly on the cover of the answer-book in the space provided for this purpose. No credit will be given for the answers written in a medium other than that specified in the Admission Ticket.

Candidates should attempt Question Nos. **1** and **5** which are compulsory, and any *three* of the remaining questions, selecting at least one question from each Section.

*All* questions carry equal marks.

---

*ವಿಶೇಷ ಸೂಚನೆ :* ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[ Turn over

## SECTION - A

1. Answer any *three* of the following each in about 200 words :

   (a) Limitations of Historical accounting in inflationary conditions.

   (b) Appointment of auditor for a company.

   (c) Valuation of the perquisite of car under the Income Tax Act.

   (d) Reconciliation of cost and financial accounts.

2. (a) What is a variance ? Indicate its significance to management.

   (b) Mr. Kiran is employed with Surya Tubes Ltd. as a Sales Manager. He submits following details regarding his emoluments for the year ending 31. 03. 2002. You are required to compute his income from salaries.

| | | ***Rs. ( p.m. )*** |
|---|---|---|
| (i) | Basic Salary | 30,000 |
| (ii) | Dearness Allowance ( not forming part of salary ) | 7,500 |
| (iii) | City Compensatory Allowance | 2,500 |
| (iv) | House Rent Allowance | 10,000 |
| (v) | Rent paid by Kiran | 12,000 |
| (vi) | Children's Hostel Allowance for 3 children | 600 |

   (vii) He is provided with a car of 18 hp. with chauffeur. The car is used for both private and office work.

   (viii) The employer has given him a loan of Rs. 6,00,000 @ 4% interest for purchase of a flat under construction. The loan has been taken on 01. 12. 2001 and the repayment is yet to start.

   (ix) He was allowed to use a video camera and a laptop by the employer. The employer has purchased these assets at Rs. 45,000 and Rs. 1,25,000 respectively on 22. 02. 2001.

## ವಿಭಾಗ – A

1 ಈ ಕೆಳಗಿನ ಯಾವುದಾದರೂ ಮೂರಕ್ಕೆ, ಪ್ರತಿಯೊಂದಕ್ಕೂ ಸುಮಾರು 200 ಪದಗಳಲ್ಲಿ ಉತ್ತರಿಸಿ:

(a) ಹಣದುಬ್ಬರ ಪರಿಸ್ಥಿತಿಗಳಲ್ಲಿ ಚಾರಿತ್ರಿಕ ಜಮಾ-ಖರ್ಚು ಲೇಖಗಳ ಇತಿಮಿತಿಗಳು

(b) ಒಂದು ಕಂಪನಿಯ ಲೆಕ್ಕ ಪರಿಶೋಧಕನ ನೇಮಕಾತಿ

(c) ಆದಾಯ ತೆರಿಗೆ ಅಧಿನಿಯಮದ ಅಧೀನದಂತೆ ಮೋಟಾರು ಕಾರಿನ ಸಂಭಾವನೆಯ ಮೂಲ್ಯಾಂಕನ

(d) ವೆಚ್ಚ ಮತ್ತು ಆರ್ಥಿಕ ಲೆಕ್ಕಗಳ ಸರಿಹೊಂದಾಣಿಕೆ ( Reconciliation of cost and financial accounts )

2. (a) ಪ್ರಸರಣೆ ( Variance ) ಎಂದರೇನು ? ನಿರ್ವಹಣೆಯಲ್ಲಿ ಅದರ ಮಹತ್ವವನ್ನು ಸೂಚಿಸಿ.

(b) ಶ್ರೀ ಕಿರಣ್‌ರವರು ಮಾರಾಟ ವ್ಯವಸ್ಥಾಪಕರಾಗಿ ಸೂರ್ಯ ಟ್ಯೂಬ್ಸ್ ಲಿಮಿಟೆಡ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ದಿನಾಂಕ 31. 3. 2002 ರ ಕೊನೆಗೆ ಅವರು ವರಮಾನದ ವಿವರವನ್ನು ಈ ಕೆಳಕಂಡತೆ ಮಂಡಿಸಿದ್ದಾರೆ. ಅವರ ಸಂಬಳದಲ್ಲಿನ ಆಯವನ್ನು ಲೆಕ್ಕ ಮಾಡಿ :

| | | ರೂ. ( ತಿಂಗಳಿಗೆ ) |
|---|---|---|
| (i) | ಮೂಲ ಸಂಬಳ ( Basic salary ) | 30,000 |
| (ii) | ತುಟ್ಟಿಭತ್ಯ (ಸಂಬಳದ ಭಾಗವಾಗಿದ್ದಲ್ಲ) | 7,500 |
| (iii) | ನಗರ ಸರಿದೂಗಣೆ ಭತ್ಯ | 2,500 |
| (iv) | ಮನೆ ಬಾಡಿಗೆ ಭತ್ಯ | 10,000 |
| (v) | ಕಿರಣ್ ಬಾಡಿಗೆ ಕೊಟ್ಟಿರುವುದು | 12,000 |
| (vi) | ಕಿರಣ್‌ರ 3 ಮಕ್ಕಳ ಹಾಸ್ಟೆಲ್ ಖರ್ಚು | 600 |

(vii) ಅವರಿಗೆ 18 hp ಯುಳ್ಳ ಕಾರನ್ನು ಡ್ರೈವರ್ ಸಹಿತ ಕೊಡಲಾಗಿದೆ.ಆ ಕಾರನ್ನು ಅವರು ಸ್ವಂತಕ್ಕೆ ಹಾಗೂ ಆಫೀಸ್ ಕಾರ್ಯಕ್ಕೂ ಉಪಯೋಗಿಸುತ್ತಾರೆ.

(viii) ಕಿರಣ್‌ರವರಿಗೆ ಅವರ ಮಾಲೀಕರು ರೂ. 6,00,000 ವನ್ನು 4% ಬಡ್ಡಿಯಂತೆ ಕಟ್ಟುತ್ತಿರುವ ಮನೆಯನ್ನು ತೆಗೆದುಕೊಳ್ಳಲು ಸಾಲವಾಗಿ ಕೊಟ್ಟಿರುತ್ತಾರೆ. ಸಾಲವನ್ನು 1. 12. 2001 ರಂದು ಕೊಟ್ಟಿರುತ್ತಾರೆ. ಮರುಪಾವತಿಯನ್ನು ಇನ್ನೂ ಪ್ರಾರಂಭಿಸ ಬೇಕಾಗಿದೆ.

(ix) ವಿಡಿಯೋ ಕ್ಯಾಮೆರಾ ಮತ್ತು ಲ್ಯಾಪ್‌ಟಾಪನ್ನು ಉಪಯೋಗಿಸಲು ಕಿರಣ್‌ರವರ ಮಾಲೀಕರು ಸಮ್ಮತಿಸಿದ್ದಾರೆ. ಇವುಗಳನ್ನು ಅವರು ಕ್ರಮವಾಗಿ ರೂ. 45,000 ಮತ್ತು ರೂ. 1,25,000 ಗಳಿಗೆ 22. 2. 2001 ರಂದು ಖರೀದಿಸಿದ್ದಾರೆ.

3. (a) Discuss the various techniques used for segregating fixed and variable elements in a semi-fixed cost.

(b) ***A Ltd.*** and ***B Ltd.***, agreed to amalgamate and form a new company ***C Ltd.*** which will take over all the assets and liabilities of the two companies. In the case of ***A Ltd.*** the asset and liabilities are to be taken over at book value for shares in ***C Ltd.*** at the rate of 5 shares in ***C Ltd.*** at 10% premium ( *i.e.* Rs. 11 per share ) for every four shares in ***A Ltd.***

In the case of ***B. Ltd.*** :

(i) The debentures of ***B Ltd.*** would be paid off by issue of an equal number of debentures in ***C. Ltd.*** at a discount of 10%.

(ii) The holders of 6% preference shares of ***B Ltd.*** would be allotted four 7% preference shares of Rs. 100 each in ***C Ltd.*** for every five preference shares in ***B Ltd.***

(iii) The equity shareholders would be allotted sufficient shares in ***C Ltd.*** to cover the balance on their accounts after adjusting asset values by reducing plant and machinery by 10% and providing 5% on Sundry debtors.

The summarised Balance Sheets of the two companies prior to amalgamation were as follows :

| | ***A Ltd.*** | ***B Ltd.*** |
|---|---|---|
| | ***Rs.*** | ***Rs.*** |
| Equity share capital of Rs. 10 each | 4,00,000 | 5,00,000 |
| 6% Preference Shares of Rs. 10 each | — | 3,00,000 |
| 4% Debentures | — | 2,00,000 |
| Profit & Loss A/c | 5,00,000 | — |
| Contingency Reserve | 50,000 | — |
| Creditors | 75,000 | 90,000 |
| | 10,25,000 | 10,90,000 |
| Plant & Machinery | 8,00,000 | 8,00,000 |
| Stock | 65,000 | 60,000 |
| Debtors | 95,000 | 50,000 |
| Profit & Loss A/c | — | 1,40,000 |
| Bank | 65,000 | 40,000 |
| | 10,25,000 | 10,90,000 |

Show the journal entries in the books of ***A Ltd.*** and ***B Ltd.*** and show the Balance Sheet of ***C Ltd.***

3. (a) ಒಂದು ಅರೆಸ್ಥಿರ ವೆಚ್ಚದಲ್ಲಿ ( Semi-fixed cost ) ಸ್ಥಿರ ಮತ್ತು ಮಾರ್ಪಡುವ ವಸ್ತುಗಳನ್ನು ಪ್ರತ್ಯೇಕಿಸಲು ಉಪಯೋಗಿಸುವ ವಿವಿಧ ರೀತಿಯ ತಂತ್ರಗಳನ್ನು ಕುರಿತು ಚರ್ಚಿಸಿ.

(b) 'ಎ' ಲಿಮಿಟೆಡ್ ಮತ್ತು 'ಬಿ' ಲಿಮಿಟೆಡ್ ಎರಡೂ ಸಂಯೋಗಗೊಂಡು 'ಸಿ' ಲಿಮಿಟೆಡ್ ಎಂಬ ಹೊಸ ಕಂಪನಿಯನ್ನು ರಚಿಸಿದರು. ಅವರ ಎರಡೂ ಕಂಪನಿಗಳ ಎಲ್ಲಾ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ತೆಗೆದುಕೊಂಡಿರುವರು. 'ಎ' ಲಿಮಿಟೆಡ್‌ನ ಆಸ್ತಿ ಮತ್ತು ಜವಾಬ್ದಾರಿಗಳನ್ನು ಲಿಖಿತ ಮೌಲ್ಯದಲ್ಲಿ 'ಸಿ' ಲಿಮಿಟೆಡ್‌ನ 5 ಶೇರುಗಳ ದರದಲ್ಲಿ 10% ಪ್ರೀಮಿಯಂನಂತೆ ( ಅಂದರೆ ಪ್ರತಿ ಶೇರಿಗೆ ರೂ. 11 ರಂತೆ) 'ಎ' ಲಿಮಿಟೆಡ್‌ನ ಪ್ರತಿ 4 ಶೇರುಗಳು ಎಂದು ಪರಿಗಣಿಸಲಾಗಿದೆ.

'ಬಿ' ಲಿಮಿಟೆಡ್ ವಿಷಯದಲ್ಲಿ :

(i) 10% ಸೋಡಿ ಬಿಟ್ಟು 'ಬಿ' ಲಿಮಿಟೆಡ್‌ನ ಎಲ್ಲಾ ಡಿಬೆಂಚರ್‌ಗಳನ್ನು 'ಸಿ' ಲಿಮಿಟೆಡ್‌ನ ಸಮಾನ ಸಂಖ್ಯೆಯ ಡಿಬೆಂಚರ್‌ಗಳಾಗಿ ಪಾವತಿಸಲಾಗಿದೆ.

(ii) 'ಬಿ' ಲಿಮಿಟೆಡ್‌ನ 6% ಹಕ್ಕಿನ ಶೇರುಗಳನ್ನು ಪ್ರತಿ ಐದು ಹಕ್ಕಿನ ಶೇರುಗಳಿಗೆ 'ಸಿ' ಲಿಮಿಟೆಡ್‌ನ ಪ್ರತಿ ಶೇರಿಗೆ ರೂ. 100 ರಂತೆ ನಾಲ್ಕು 7% ಹಕ್ಕಿನ ಶೇರುಗಳಾಗಿ ಹಂಚಲಾಗಿದೆ.

(iii) ಅವರ ಲೆಕ್ಕ ಖಾತೆಗಳನ್ನು ಸರಿಪಡಿಸಲು ಅವರ ಆಸ್ತಿ ಮೌಲ್ಯಗಳಲ್ಲಿ ಯಂತ್ರ ಮತ್ತು ಸ್ಥಾವರಗಳ ಮೇಲೆ 10% ಮತ್ತು ಋಣಿಗಳ ಮೇಲೆ 5% ಸೋಡಿ ಬಿಟ್ಟು ನಂತರ 'ಸಿ' ಲಿಮಿಟೆಡ್‌ನ ಸಾಕಾಗುವಷ್ಟು ಈಕ್ವಿಟಿ ಶೇರುಗಳಾಗಿ ಹಂಚಲಾಗಿದೆ.

ಎರಡೂ ಕಂಪನಿಗಳು ಒಟ್ಟಾಗುವ ಮುನ್ನ ಅವರ ಸಂಕ್ಷಿಪ್ತ ಅಢಾವೆ ಪತ್ರಿಕೆಗಳು ಈ ಕೆಳಗಿನಂತಿವೆ.

| | 'ಎ' ಲಿಮಿಟೆಡ್ | 'ಬಿ' ಲಿಮಿಟೆಡ್ |
|---|---|---|
| | ರೂ. | ರೂ. |
| ಈಕ್ವಿಟಿ ಶೇರು ಬಂಡವಾಳ (ಪ್ರತಿ ಶೇರು ರೂ. 10 ರಂತೆ) | 4,00,000 | 5,00,000 |
| 6% ಹಕ್ಕಿನ ಶೇರುಗಳು (ಪ್ರತಿ ಶೇರು ರೂ. 10 ರಂತೆ) | — | 3,00,000 |
| 4% ಡಿಬೆಂಚರುಗಳು | — | 2,00,000 |
| ಲಾಭ ಮತ್ತು ನಷ್ಟ ಖಾತೆ | 5,00,000 | — |
| ಅನಿಶ್ಚಿತ ಮೀಸಲು | 50,000 | — |
| ಧಣಿಗಳು ( Creditors ) | 75,000 | 90,000 |
| | 10,25,000 | 10,90,000 |
| ಸ್ಥಾವರ ಮತ್ತು ಯಂತ್ರ | 8,00,000 | 8,00,000 |
| ಸರಕು | 65,000 | 60,000 |
| ಋಣಿಗಳು ( Debtors ) | 95,000 | 50,000 |
| ಲಾಭ ಮತ್ತು ನಷ್ಟ ಖಾತೆ | — | 1,40,000 |
| ಬ್ಯಾಂಕಿನಲ್ಲಿ ನಗದು | 65,000 | 40,000 |
| | 10,25,000 | 10,90,000 |

'ಎ' ಲಿಮಿಟೆಡ್ ಮತ್ತು 'ಬಿ' ಲಿಮಿಟೆಡ್‌ನ ರೋಜು ಪುಸ್ತಕಗಳನ್ನು ದಾಖಲಿಸಿ ಮತ್ತು 'ಸಿ' ಲಿಮಿಟೆಡ್‌ನ ಅಢಾವೆ ಪತ್ರಿಕೆಯನ್ನು ತಯಾರಿಸಿ.

4. (a) Explain in brief the special points in audit of a general insurance company.

(b) Farukawa Ltd. produces two products and its budget for 60% level of activity for the year is given below :

| ***Particulars*** | ***Product 'A'*** | ***Product 'B'*** |
|---|---|---|
| | **Rs.** | **Rs.** |
| Raw material cost per unit | 7·50 | 3·50 |
| Direct labour cost per unit | 4·00 | 3·00 |
| Variable cost per unit | 2·00 | 1·50 |
| Fixed cost per unit | 6·00 | 4·50 |
| Selling price per unit | 20·00 | 15·00 |
| | **Units** | **Units** |
| Production and Sales | 4,000 | 6,000 |

The managing director not being satisfied with the projected results as stated above, referred the Budget to the Marketing Manager for improving the performance. The Marketing Manager proposed that the sales quantity of products *A* and *B* could be increassed by 50% provided the selling prices were reduced by 5% in the case of product *A* and by 10% in the case of product *B*. The price reduction should be applicable to the entire quantity of sales of each of the products.

(i) Present the overall profitability under the original budget and the revised budget after taking the increased sales into consideration.

(ii) Find out overall Break-even Sales under the original budget and the revised budget.

4 (a) ಒಂದು ಸಾಮಾನ್ಯ ವಿಮಾ ಕಂಪನಿಯ ಲೆಕ್ಕ ಪರಿಶೋಧನೆ ಮಾಡುವಾಗ ಗಮನದಲ್ಲಿರಿಸಿಕೊಳ್ಳಬೇಕಾದ ವಿಶೇಷ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

(b) ಘರುಕಾವ ಲಿಮಿಟೆಡ್ ಎರಡು ಉತ್ಪನ್ನಗಳನ್ನು ಉತ್ಪಾದಿಸುತ್ತದೆ ಮತ್ತು ಆ ವರ್ಷದಲ್ಲಿ ಅದರ ಚಟುವಟಿಕೆಯ 60% ಮಟ್ಟದ ಮುಂಗಡ ಪತ್ರ ಈ ಕೆಳಗಿನಂತಿದೆ:

| *ವಿವರಗಳು* | *ಉತ್ಪನ್ನ 'ಎ'* | *ಉತ್ಪನ್ನ 'ಬಿ'* |
|---|---|---|
| ಒಂದು ಘಟಕಕ್ಕೆ ಬೇಕಾಗುವ ಕಚ್ಚಾ ಮಾಲಿನ ವೆಚ್ಚ | 7.50 | 3.50 |
| ಒಂದು ಘಟಕದ ಪ್ರತ್ಯಕ್ಷ ದುಡಿಮೆ ವೆಚ್ಚ | 4.00 | 3.00 |
| ಒಂದು ಘಟಕದ ಅಸ್ಥಿರ ವೆಚ್ಚ | 2.00 | 1.50 |
| ಒಂದು ಘಟಕದ ಸ್ಥಿರ ವೆಚ್ಚ | 6.00 | 4.50 |
| ಒಂದು ಘಟಕದ ಮಾರುವ ಬೆಲೆ | 20.00 | 15.00 |
| | *ಘಟಕಗಳು* | *ಘಟಕಗಳು* |
| ಉತ್ಪನ್ನ ಮತ್ತು ಮಾರಾಟ | 4,000 | 6,000 |

ವ್ಯವಸ್ಥಾಪಕ ನಿರ್ದೇಶಕರು, ಮಾರಾಟ ವ್ಯವಸ್ಥಾಪಕರ ಗಮನಕ್ಕೆ ಮೇಲಿನ ಮುಂಗಡ ಪತ್ರವನ್ನು ಗಮನಕ್ಕೆ ತಂದು ಫಲಿತಾಂಶಗಳಿಗೆ ಅಸಮಾದಾನ ವ್ಯಕ್ತಪಡಿಸಿ ಕಾರ್ಯ ನಿರ್ವಹಣೆಯನ್ನು ಸುಧಾರಿಸಿಕೊಳ್ಳಲು ತಿಳಿಸಿದರು. ಆಗ ಮಾರಾಟ ವ್ಯವಸ್ಥಾಪಕರು, ಉತ್ಪನ್ನ 'ಎ'ಯ ದರವನ್ನು 5% ಮತ್ತು ಉತ್ಪನ್ನ 'ಬಿ' ಯ ದರವನ್ನು 10% ಇಳಿಸಿದಲ್ಲಿ ಮಾರಾಟವನ್ನು 50% ಹೆಚ್ಚಿಸಬಹುದು ಎಂದು ಸಲಹೆ ಇತ್ತರು. ಮಾರಾಟದ ಉತ್ಪನ್ನಗಳ ಪ್ರತಿಯೊಂದಕ್ಕೂ ಬೆಲೆ ರಿಯಾಯಿತಿ ಕೊಡಲಾಯಿತು.

(i) ಮಾರಾಟ ಹೆಚ್ಚಳವನ್ನು ಪರಿಗಣನೆಗೆ ತೆಗೆದುಕೊಂಡ ನಂತರ ಮೊದಲಿನ ಮುಂಗಡ ಪತ್ರ ಮತ್ತು ಪರಿಷ್ಕರಿಸಿದ ಮುಂಗಡ ಪತ್ರವನ್ನನುಸರಿಸಿ ಸಮಸ್ತ ಲಾಭಾಂಶವನ್ನು ತಿಳಿಸಿ.

(ii) ಮೊದಲಿನ ಮುಂಗಡ ಪತ್ರ ಮತ್ತು ಪರಿಷ್ಕರಿಸಿದ ಮುಂಗಡ ಪತ್ರವನ್ನನುಸರಿಸಿ ಸಮಸ್ತ ಸಂತುಲನ-ಸ್ತರ ( Break-even ) ಮಾರಾಟವನ್ನು ಕಂಡುಹಿಡಿಯಿರಿ.

## SECTION - B

5. Answer any *three* of the following, each in about 200 words :

   (a) Elucidate briefly the recommendations of Chore Committee.

   (b) Distinguish clearly between Negotiation and Assignment.

   (c) "According to Walter's Model the optimum payout ratio can be either zero or 100%." Explain the circumstances when this is true.

   (d) Explain the operational policies of ICICI.

6. (a) Explain the concept of Economic Order Quantity.

   (b) **S. Ltd.** has following Capital Structure :

| | ***Rs.*** |
|---|---|
| Common Shares ( 2,00,000 Shares ) | 40,00,000 |
| 6% Preference Shares | 10,00,000 |
| 8% Debentures | 30,00,000 |
| | 80,00,000 |

The common share of the company sells for Rs. 20. It is expected that the company will pay next year a dividend of Rs. 2 per share which will grow at 7% forever. Assume 50% taxation.

(i) Compute a weighted average cost of capital on existing capital structure.

(ii) Compute the revised weighted average cost of capital if the company raises an additional Rs. 20,00,000 debt by issue of 10% debentures. This would result in increasing the expected dividend to Rs. 3 per share and leave the growth rate unchanged, but the price of the common share will fall to Rs. 15.

## ವಿಭಾಗ – B

5. ಈ ಕೆಳಗಿನ ಯಾವುದಾದರೂ ಮೂರಕ್ಕೆ, ಪ್ರತಿಯೊಂದಕ್ಕೂ ಸುಮಾರು 200 ಪದಗಳಲ್ಲಿ ಉತ್ತರಿಸಿ:

(a) ಚೋರೆ ಕಮಿಟಿಯ ಶಿಫಾರಸ್ಸುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

(b) ಸಂಧಾನ ( Negotiation ) ಮತ್ತು ಸಮನುದೇಶನ ( Assignment ) ಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

(c) 'ವಾಲ್ಟರನ ಮೇಲ್ಪಂಕ್ತಿಯ ಪ್ರಕಾರ, ಅತ್ಯುತ್ತಮ ವಿಭಜನ ಪ್ರಮಾಣವು ಒಂದೇ ಶೂನ್ಯ ಅಥವಾ 100%.' ಇದು ಸತ್ಯವಾದ ಸಂದರ್ಭದಲ್ಲಿ ಇದನ್ನು ಕುರಿತು ವಿವರಿಸಿ.

(d) ICICI ನ ಕಾರ್ಯವಿಧಾನ ನೀತಿಗಳನ್ನು ವಿವರಿಸಿ.

6. (a) ಆರ್ಥಿಕ ಕ್ರಮ ಪರಿಮಾಣದ ( Economic Order Quantity ) ಪರಿಕಲ್ಪನೆಯನ್ನು ವಿವರಿಸಿ.

(b) 'ಎಸ್' ಲಿಮಿಟೆಡ್ ಈ ಕೆಳಗಿನ ಬಂಡವಾಳ ಸಂರಚನೆಯನ್ನು ಹೊಂದಿದೆ:

| | |
|---|---|
| ಸಾಮಾನ್ಯ ಶೇರುಗಳು ( 2,00,000 ಶೇರುಗಳು ) | ರೂ. 40,00,000 |
| 6% ಹಕ್ಕಿನ ಶೇರುಗಳು | ರೂ. 10,00,000 |
| 8% ಡಿಬೆಂಚರುಗಳು | ರೂ. 30,00,000 |
| | ರೂ. 80,00,000 |

ಕಂಪನಿಯು ಸಾಮಾನ್ಯ ಶೇರುಗಳನ್ನು ರೂ. 20 ರಂತೆ ಮಾರುತ್ತದೆ. ಮುಂದಿನ ವರ್ಷಕ್ಕೆ ಕಂಪನಿಯು ಪ್ರತಿ ಶೇರಿಗೆ ರೂ. 2 ರಂತೆ ಡಿವಿಡೆಂಡ್ ಕೊಡಲು ನಿರೀಕ್ಷಿಸಿದೆ. ಅದು 7% ಗೆ ಎಂದೆಂದಿಗೂ ಬೆಳೆಯುತ್ತದೆ. 50% ತೆರಿಗೆ ಎಂದು ಊಹಿಸಿ.

(i) ಪ್ರಸ್ತುತ ಬಂಡವಾಳ ಸಂರಚನೆಯ ಮೇಲೆ ಬಂಡವಾಳದ ಅಧಿಕೃತ ಸರಾಸರಿ ವೆಚ್ಚವನ್ನು ಕಂಡುಹಿಡಿಯಿರಿ.

(ii) 10% ಡಿಬೆಂಚರುಗಳನ್ನು ಕೊಡುವ ಮೂಲಕ ಕಂಪನಿಯು ಬಂಡವಾಳವನ್ನು ಹೆಚ್ಚಿಸಿ ಮತ್ತೆ ರೂ. 20,00,000 ವನ್ನು ಪಡೆದಾಗ ಪರಿಷ್ಕೃತ ಅಧಿಕೃತ ಸರಾಸರಿ ವೆಚ್ಚವನ್ನು ಲೆಕ್ಕ ಮಾಡಿ. ಇದರ ಫಲಿತಾಂಶ ಪ್ರತಿ ಶೇರಿಗೆ ರೂ. 3 ರಂತೆ ನಿರೀಕ್ಷಿತ ಡಿವಿಡೆಂಡ್ ಹೆಚ್ಚಾಗುತ್ತದೆ ಮತ್ತು ದರದ ಬೆಳವಣಿಗೆಯಲ್ಲಿ ಯಾವುದೇ ಬದಲಾವಣೆ ಇಲ್ಲವಾಗುತ್ತದೆ, ಆದರೆ ಸಾಮಾನ್ಯ ಶೇರಿನ ಬೆಲೆ ರೂ. 15 ಕಡಿಮೆಯಾಗುತ್ತದೆ.

7. (a) Explain the important sources for financing long term investment.

(b) From the following information you are required to estimate the net working capital :

| | Cost per unit Rs. |
|---|---|
| Raw material | 400 |
| Direct Labour | 150 |
| Overheads ( Excluding Depreciation ) | 300 |

Additional information :

| | |
|---|---|
| Selling price | Rs. 1,000 per unit |
| Output | 52,000 units |
| Raw material in stock | Average 4 weeks |
| Work in progress ( assumed 50% completion stage with full material consumption ) | Average 2 weeks |
| Finished goods in stock | Average 4 weeks |
| Credit allowed by suppliers | Average 4 weeks |
| Credit allowed to debtors | Average 8 weeks |
| Cash at bank expected to be | Rs. 50,000 |

Assume that production is sustained at an even pace during 52 weeks of the year. All sales are on credit basis.

7. (a) ದೀರ್ಘಾವಧಿ ಹಣಕಾಸು ಹೂಡಿಕೆಯಲ್ಲಿನ ಪ್ರಮುಖ ಮೂಲಗಳನ್ನು ವಿವರಿಸಿ.

(b) ಈ ಕೆಳಗಿನ ವಿವರಗಳನ್ನು ಪರಿಶೀಲಿಸಿ ನಿವ್ವಳ ಕಾರ್ಯಶೀಲ ಬಂಡವಾಳ ( Net working capital ) ವನ್ನು ಅಂದಾಜು ಮಾಡಿ:

| | ಪ್ರತಿ ಘಟಕದ ವೆಚ್ಚ ರೂ. |
|---|---|
| ಕಚ್ಚಾ ಮಾಲು | 400 |
| ಪ್ರತ್ಯಕ್ಷ ದುಡಿಮೆ ( Direct labour ) | 150 |
| ಮೇಲ್ವೆಚ್ಚ ( Overheads ) (ಸವಕಳಿ ಬಿಟ್ಟು) | 300 |

***ಅಧಿಕೃತ ವಿವರ:***

| | |
|---|---|
| ಮಾರಾಟ ದರ | ರೂ. 1,000 (ಒಂದು ಘಟಕಕ್ಕೆ) |
| ಉತ್ಪಾದನೆ ( Output ) | 52,000 ಘಟಕಗಳು |
| ಕಚ್ಚಾ ಮಾಲು ಸರಕು | ಸರಾಸರಿ 4 ವಾರಗಳು |
| ಪ್ರಗತಿಯಲ್ಲಿರುವ ಕೆಲಸ (ಕಚ್ಚಾ ಮಾಲುಗಳನ್ನೆಲ್ಲಾ ಉಪಯೋಗಿಸಲಾಗಿದೆ ಮತ್ತು 50% ಕೆಲಸವು ಮುಗಿದ ಹಂತದಲ್ಲಿದೆ ಎಂದು ಭಾವಿಸಿ) | ಸರಾಸರಿ 2 ವಾರಗಳು |
| ಪರಿಷ್ಕೃತ ವಸ್ತುಗಳ ಸರಕು | ಸರಾಸರಿ 4 ವಾರಗಳು |
| ಪೂರೈಕೆದಾರರಿಂದ ಮಂಜೂರಾದ ಸಾಲ | ಸರಾಸರಿ 4 ವಾರಗಳು |
| ಋಣಿಗಳಿಗೆ ಮಂಜೂರಾದ ಸಾಲ | ಸರಾಸರಿ 8 ವಾರಗಳು |
| ಬ್ಯಾಂಕಿನಲ್ಲಿ ನಗದು ನಿರೀಕ್ಷಿಸಿರುವುದು | 50,000 |

ವರ್ಷದ 52 ವಾರಗಳಲ್ಲಿ ಒಂದು ಸಮ ರೀತಿಯಂತೆ ( Even pace ) ಉತ್ಪಾದನೆಯು ಆಧಾರವಾಗಿರುವುದೆಂದು ಭಾವಿಸಿ. ಎಲ್ಲಾ ಮಾರಾಟಗಳು ಸಾಲದ ರೂಪದಲ್ಲಿರುತ್ತವೆ.

8. (a) Write a note on Non-Performing Assets in banks.

(b) A product is currently manufactured on a machine that is not fully depreciated for tax purposes and has a book value of Rs. 70,000. It was purchased for Rs. 2,10,000 twenty years ago. The cost of the product is as follows :

| | *Unit cost ( Rs. )* |
|---|---|
| Direct Labour | 28·00 |
| Indirect Labour | 14·00 |
| Other variable overhead | 10·50 |
| Fixed Overhead | 17·50 |
| **Total** | 70·00 |

In the last year 10,000 units were produced. It is expected that with suitable repairs the old machine can be used indefinitely in future. The repairs are expected to average Rs. 75,000 per year.

An equipment manufacturer has offered to accept the old machine as a trade-in for a new equipment. The new machine would cost Rs. 4,20,000 before allowing for Rs. 1,05,000 for the old equipment. The projected cost associated with the new machine is as below :

| | *Unit cost ( Rs. )* |
|---|---|
| Direct Labour | 14·00 |
| Indirect Labour | 21·00 |
| Other variable overhead | 7·00 |
| Fixed Overhead | 22·75 |
| **Total** | 64·75 |

The fixed overhead cost is allocation from other departments plus the depreciation of the equipment. The old machine can be sold for Rs. 50,000 in the open market. The new machine has an expected life of ten years and a salvage value of Rs. 20,000. The current income tax rate is 50%. For tax purposes, the cost of the new machine and the book value of the old machine may be depreciated in ten years. The minimum required rate is 10%. It is expected that future demand of the product will stay at 10,000 units per year. Should the new machine be purchased ? Ignore capital gains tax.

PV of annuity for nine years is 5·759 and PV for tenth year is 0·386 at 10%.

8. (a) ಬ್ಯಾಂಕ್‌ಗಳಲ್ಲಿ ಕಾರ್ಯರೂಪಕ್ಕೆ ಬಾರದ ಆಸ್ತಿಗಳ ಮೇಲೆ ಟಿಪ್ಪಣಿ ಬರೆಯಿರಿ.

(b) ಒಂದು ಯಂತ್ರದಲ್ಲಿ ಪ್ರಸ್ತುತವಾಗಿ ಒಂದು ಉತ್ಪನ್ನವನ್ನು ಉತ್ಪಾದಿಸಲಾಗುತ್ತಿದೆ. ಆ ಯಂತ್ರಕ್ಕೆ ತೆರಿಗೆಯ ಉದ್ದೇಶದಿಂದ ಸವಕಳಿಯನ್ನು ಪೂರ್ಣವಾಗಿ ತೆಗೆದಿಲ್ಲ ಮತ್ತು ಅದರ ಲಿಖಿತ ಮೌಲ್ಯವು ರೂ. 70,000 ಆಗಿರುತ್ತದೆ. ಆ ಯಂತ್ರವನ್ನು ಇಪ್ಪತ್ತು ವರ್ಷಗಳ ಹಿಂದೆ ರೂ. 2,10,000 ದಲ್ಲಿ ಖರೀದಿಸಲಾಗಿತ್ತು. ಉತ್ಪನ್ನ ವೆಚ್ಚ ಈ ಕೆಳಕಂಡಂತಿರುವುದು:

| | *ಘಟಕ ವೆಚ್ಚ ( ರೂ.ಗಳಲ್ಲಿ )* |
|---|---|
| ಪ್ರತ್ಯಕ್ಷ ದುಡಿಮೆ | 28.00 |
| ಪರೋಕ್ಷ ದುಡಿಮೆ | 14.00 |
| ಇತರ ಅಸ್ಥಿರ ಮೇಲ್ವೆಚ್ಚ | 10.50 |
| ಸ್ಥಿರ ಮೇಲ್ವೆಚ್ಚ | 17.50 |
| **ಮೊತ್ತ** | 70.00 |

ಕಳೆದ ವರ್ಷದಲ್ಲಿ ಆ ಯಂತ್ರವು 10,000 ಘಟಕಗಳನ್ನು ಉತ್ಪಾದಿಸಿತು. ಆ ಯಂತ್ರಕ್ಕೆ ತಕ್ಕ ರಿಪೇರಿಗಳನ್ನು ಮಾಡಿಸಿದರೆ ಭವಿಷ್ಯತ್ತಿನಲ್ಲಿ ಅನಿಶ್ಚಿತವಾಗಿ ಉಪಯೋಗಕ್ಕೆ ಬರುತ್ತದೆ ಎಂದು ನಿರೀಕ್ಷಿಸಲಾಗಿದೆ. ರಿಪೇರಿಗೆ ವಾರ್ಷಿಕ ಸರಾಸರಿ ರೂ. 75,000 ಆಗಬಹುದೆಂದು ನಿರೀಕ್ಷಿಸಲಾಗಿದೆ.

ಒಬ್ಬ ಕಾರ್ಖಾನೆ ಮಾಲಿಕನು ಹಳೇ ಯಂತ್ರವನ್ನು ತೆಗೆದುಕೊಂಡು ಹೊಸ ಯಂತ್ರವನ್ನು ಕೊಡಲು ಮುಂದಾದನು. ಹಳೇ ಯಂತ್ರದ ಬೆಲೆ ರೂ. 1,05,000 ಎಂದು ಪರಿಗಣಿಸುವ ಮುನ್ನ ಹೊಸ ಯಂತ್ರದ ಬೆಲೆ ರೂ. 4,20,000 ಆಗಿರುತ್ತದೆ. ಹೊಸ ಯಂತ್ರಕ್ಕೆ ಸಂಬಂಧಿಸಿದ ಯೋಜನಾ ವೆಚ್ಚ ಈ ರೀತಿಯಾಗಿರುತ್ತದೆ.

| | *ಘಟಕ ವೆಚ್ಚ ( ರೂ.ಗಳಲ್ಲಿ )* |
|---|---|
| ಪ್ರತ್ಯಕ್ಷ ದುಡಿಮೆ | 14.00 |
| ಪರೋಕ್ಷ ದುಡಿಮೆ | 21.00 |
| ಇತರ ಅಸ್ಥಿರ ಮೇಲ್ವೆಚ್ಚ | 7.00 |
| ಸ್ಥಿರ ಮೇಲ್ವೆಚ್ಚ | 22.75 |
| **ಮೊತ್ತ** | 64.75 |

ಸ್ಥಿರ ಮೇಲ್ವೆಚ್ಚದ ಖರ್ಚನ್ನು ಇತರ ಶಾಖೆಗಳಿಗೆ ಹಂಚಲಾಗಿದೆ ಮತ್ತು ಯಂತ್ರದ ಸವಕಳಿಗೆ ಸೇರಿಸಲಾಗಿದೆ. ಹಳೇ ಯಂತ್ರವನ್ನು ರೂ. 50,000 ಕ್ಕೆ ಮುಕ್ತ ಮಾರುಕಟ್ಟೆಯಲ್ಲಿ ಮಾರಲಾಗಿದೆ. ಹೊಸ ಯಂತ್ರದ ಜೀವನಾವಧಿಯನ್ನು ಹತ್ತು ವರ್ಷಗಳೆಂದು ನಿರೀಕ್ಷಿಸಲಾಗಿದೆ ಮತ್ತು ನಿಸ್ಸಾರ ಮೌಲ್ಯ ( Salvage value ) ರೂ. 20,000 ಆಗಿದೆ. ಪ್ರಸ್ತುತ ಆದಾಯ ತೆರಿಗೆ ದರವು 50%. ತೆರಿಗೆ ಉದ್ದೇಶದಿಂದ ಹೊಸ ಯಂತ್ರದ ವೆಚ್ಚ ಮತ್ತು ಹಳೆ ಯಂತ್ರದ ಪುಸ್ತಕ ಬೆಲೆಯನ್ನು ಹತ್ತು ವರ್ಷಗಳಿಗೆ ಸವಕಳಿ ತೆಗೆಯಬಹುದಾಗಿದೆ. ಬೇಕಾದ ಕನಿಷ್ಟ ದರವು 10% ಆಗಿರುತ್ತದೆ. ಭವಿಷ್ಯತ್ತಿನ ಉತ್ಪನ್ನದ ಬೇಡಿಕೆಯು ವಾರ್ಷಿಕ 10,000 ಘಟಕಗಳೆಂದು ನಿರೀಕ್ಷಿಸಲಾಗಿದೆ. ಹೊಸ ಯಂತ್ರವನ್ನು ಕೊಳ್ಳಬಹುದೆ ? ಬಂಡವಾಳ ಲಾಭದ ತೆರಿಗೆಯನ್ನು ಪರಿಗಣಿಸಬಾರದು.

ಒಂಬತ್ತು ವರ್ಷಗಳಿಗೆ ವರ್ಷಾಸನ ನಿಜಮೌಲ್ಯವು ( PV ) 5·759 ಆಗಿದೆ ಮತ್ತು ಹತ್ತನೇ ವರ್ಷ 10% ನಂತೆ 0·386.

**06/II**

# 2002

# COMMERCE AND ACCOUNTANCY

## Paper II

*Time : 3 Hours ]* *[ Maximum Marks : 300*

---

*INSTRUCTIONS*

Each question is printed both in English and in Kannada.

Answers must be written in the medium specified ( English *or* Kannada ) in the Admission Ticket issued to you, which must be stated clearly on the cover of the answer-book in the space provided for this purpose. No credit will be given for the answers written in a medium other than that specified in the Admission Ticket.

Candidates should attempt Question Nos. **1** and **5** which are compulsory, and any *three* of the remaining questions, selecting at least *one* question from each Section.

*All* questions carry equal marks.

---

***ವಿಶೇಷ ಸೂಚನೆ :*** ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[ Turn over

## SECTION - A

1. Write short notes on any *three* of the following in not more than 200 words each :

   (a) Goal Displacement

   (b) Project Organisation

   (c) Leadership Styles

   (d) Power Tactics.

2. Critically appraise the systems approach to organisation.

3. What is the concept of Organisational Change ? Why most of the people in the organisation resist change ? How do you think the resistance to change can be overcome ?

4. Define and distinguish between Theory *X* and Theory *Y* of motivation.

## ವಿಭಾಗ - ಎ

1. ಈ ಕೆಳಗಿನ ಯಾವುದಾದರೂ ಮೂರಕ್ಕೆ, ಪ್ರತಿಯೊಂದಕ್ಕೂ 200 ಪದಗಳಿಗೆ ಮೀರದಂತೆ ಲಘು ಟಿಪ್ಪಣಿ ಬರೆಯಿರಿ:

   (a) ಗುರಿಯ ಸ್ಥಳಾಂತರತೆ ( Goal displacement )

   (b) ಪರಿಯೋಜನಾ ಸಂಘಟನೆ ( Project organisation )

   (c) ನಾಯಕತ್ವದ ಶೈಲಿ

   (d) ಕಾರ್ಯಶಕ್ತಿ ಕೌಶಲ್ಯ ( Power tactics )

2. ಸುಸಂಘಟನೆಗೆ ವ್ಯವಸ್ಥಾ ಉಪಾಗಮ ( System approach to organisation ) ಕುರಿತು ವಿಮರ್ಶಾತ್ಮಕವಾಗಿ ಸೂಚಿಸಿ.

3. ವ್ಯವಸ್ಥಿತ ಪರಿವರ್ತನೆಯ ಪರಿಕಲ್ಪನೆ ಎಂದರೇನು ? ಹೆಚ್ಚು ಜನರು ಒಂದು ಸಂಸ್ಥೆಯಲ್ಲಿ ಏತಕ್ಕಾಗಿ ಪರಿವರ್ತನೆಗಳನ್ನು ವಿರೋಧಿಸುತ್ತಾರೆ ? ಪರಿವರ್ತನೆಯ ವಿರೋಧತೆಯು ಹೇಗೆ ಹೊರಬರುತ್ತದೆಂದು ನೀವು ತಿಳಿಯುತ್ತೀರಿ ?

4. ಪ್ರೇರಣೆಯ ಸಿದ್ಧಾಂತ $X$ ಮತ್ತು ಸಿದ್ಧಾಂತ $Y$ ಗಳನ್ನು ನಿರೂಪಿಸಿ ಮತ್ತು ವ್ಯತ್ಯಾಸಪಡಿಸಿ.

## SECTION - B

5. Write short notes on any *three* of the following in not more than 200 words each :

   (a) Workers' Education

   (b) Scope of Industrial Relations

   (c) Outside Leadership in Indian Trade Union

   (d) Labour Court.

6. Has collective bargaining flourished in India ? If not, what are the reasons ? How can you make it work in India ?

7. Discuss the preventive measures for industrial disputes at the Unit level and beyond the Unit level.

8. "High absenteeism and turnover are the indicators of poor industrial relations in Indian Industries." Comment.

## ವಿಭಾಗ - ಬಿ

5. ಈ ಕೆಳಗಿನ ಯಾವುದಾದರೂ **ಮೂರಕ್ಕೆ**, ಪ್ರತಿಯೊಂದಕ್ಕೂ ಸುಮಾರು 200 ಪದಗಳಲ್ಲಿ ಲಘು ಟಿಪ್ಪಣಿ ಬರೆಯಿರಿ:

   (a) ಕೆಲಸಗಾರರ ಶಿಕ್ಷಣ

   (b) ಕೈಗಾರಿಕಾ ಬಾಂಧವ್ಯಗಳಲ್ಲಿನ ವ್ಯಾಪ್ತಿ ( Scope )

   (c) ಭಾರತೀಯ ವ್ಯಾಪಾರ ಸಂಘದಲ್ಲಿನ ಹೊರ ನಾಯಕತ್ವ

   (d) ಕಾರ್ಮಿಕ ನ್ಯಾಯಾಲಯ ( Labour court )

6. ಭಾರತದಲ್ಲಿ ಸಾಮೂಹಿಕ ಚೌಕಾಸಿ ವ್ಯಾಪಾರ ವರ್ಧಿಸುತ್ತಿದೆಯೆ ? ಇಲ್ಲವಾದಲ್ಲಿ ಕಾರಣಗಳೇನು ? ಭಾರತದಲ್ಲಿ ಇದನ್ನು ಹೇಗೆ ಕೃತಿಗೆ ತರಬೇಕು ?

7. ಘಟಕ ಮಟ್ಟದಲ್ಲಿ ಮತ್ತು ಘಟಕ ಮಟ್ಟದಿಂದ ಹೊರಗೆ ಕೈಗಾರಿಕಾ ವಿವಾದಗಳ ನಿವಾರಣಾ ಮಾರ್ಗಗಳನ್ನು ಕುರಿತು ಚರ್ಚಿಸಿ.

8. 'ಭಾರತೀಯ ಕೈಗಾರಿಕೆಗಳಲ್ಲಿ ಅಧಿಕ ಅನುಪಸ್ಥಿತಿ ( Absenteeism ) ಮತ್ತು ಒಟ್ಟು ಮಾರಾಟ ( Turnover ) ಸಾರವಿಲ್ಲದ ಕೈಗಾರಿಕಾ ಸಂಬಂಧಗಳ ಸೂಚಕಗಳು.' ವಿಮರ್ಶಿಸಿ.